ಅಸಲು ದಾವಾ ಸಂಖ್ಯೆ: **659/2022**
ಪಿ.ಡಬ್ಲ್ಯೂ :- **1**

**ದಿನಾಂಕ:01.08.2024 ರಂದು ಸಾಕ್ಷಿ ಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರು ಶ್ರೀಃ ಎ.ಎಂ.ಎಂ. ರವರಿಂದಃ**

ದಾವಾ ಸ್ವತ್ತಿನ ಸಿಟಿಎಸ್ ನಂ. 269/3ಬಿ ಯ ಮನೆಯ ಮುಂದಿನ ಭಾಗವನ್ನು ಆರ್ ಸಿಸಿ ಇಂದ ಕಟ್ಟಲಾಗಿದೆ ಎಂದರೆ ಸರಿ. ಆ ಆರ್.ಸಿ.ಸಿ ಮೇಲ್ಛಾವಣಿ ಎಷ್ಟು ಅಳತೆ ಇದೆ ಎಂದರೆ 30X17 ಅಡಿ ಇದೆ ಎನ್ನುತ್ತಾರೆ. ಅದರಲ್ಲಿ 3 ಅಂಗಡಿಗಳು ಇವೆ. ನಾವು 3 ಜನ ಅಣ್ಣ ತಮ್ಮಂದಿರಿಗೆ ಒಂದೊಂದು ಅಂಗಡಿ ಇದೆ ಎಂದರೆ ಸರಿ. ನಾನು ಮತ್ತು ನನ್ನ ದೊಡ್ಡ ಅಣ್ಣ ನಮ್ಮ ನಮ್ಮ ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿದ್ದೇವೆ. ಇನ್ನೊಬ್ಬ ಅಣ್ಣನ ಮಗ ಅಂದರೆ ಪ್ರತಿವಾದಿ 3 ಇನ್ನೊಂದು ಅಂಗಡಿಯ ಕಬ್ಜೆಯಲ್ಲಿದ್ದು ತಾನೇ ಅಂಗಡಿ ನಡೆಸುತ್ತಿದ್ದಾನೆ. ಈ ದಾವೆಯ ವಾದ ಪತ್ರದಲ್ಲಿ ನಾನು ಸಿ.ಟಿ.ಎಸ್ ನಂ. 269/3ಬಿ ರ ಮನೆಯ ಮೇಲ್ಛಾವಣಿ ಆರ್.ಸಿ.ಸಿ ಇರುವ ಬಗ್ಗೆ ಮತ್ತು ಅದರಲ್ಲಿ 3 ಅಂಗಡಿಗಳು ಇರುವ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಈ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಮುಂಭಾಗ ಆರ್ ಸಿ ಸಿ ಇರುವುದರಿಂದ ಅದರ ಕಿಮ್ಮತ್ತು ಎಷ್ಟು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆರ್ ಸಿಸಿ ಮನೆ ಕಟ್ಟಲು ಎಷ್ಟು ಖರ್ಚಾಗಿತ್ತು ಎಂದರೆ ಸಾಕ್ಷಿ ಆ ಮನೆಯನ್ನು 1968ರಲ್ಲಿ ಕಟ್ಟಲಾಗಿದ್ದು ಎಷ್ಟು ಖರ್ಚಾಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಈಗಿನ ಕಿಮ್ಮತ್ತು ಎಷ್ಟು ಇದೆ ಎಂದು ನನಗೆ ಹೇಳಲಾಗುತ್ತದೆ. ದಾವಾ ಸ್ವತ್ತಿನ ಮುಂಭಾಗ Commercial Building (ವ್ಯವಹಾರಿಕ ಕಟ್ಟಡ) ಎಂದರೆ ಸರಿ ಸಾಕ್ಷಿ ಮುಂದುವರೆದು ಆ ಮನೆ ಮುಂಭಾಗ ವ್ಯವಹಾರಿಕ ಕಟ್ಟಡ ಮತ್ತು ಹಿಂಭಾಗ ವಾಸಯೋಗ್ಯ ಮನೆಯಾಗಿದೆ ಎನ್ನುತ್ತಾರೆ. ದಾವಾ ಸ್ವತ್ತಿನ ಮನೆಯ ಒಂದು ಬದಿ ಸರ್ಕಾರಿ ಶೌಚಾಲಯ ಮತ್ತು ಇನ್ನೊಂದು ಬದಿ ವ್ಯವಹಾರಿಕ ಕಟ್ಟಡ ಇದೆ ಎನ್ನುತ್ತಾರೆ. ಶೌಚಾಲಯ

ಆದ ನಂತರ ಮತ್ತೆ ಅಂಗಡಿಗಳು ಇವೆ ಎಂದರೆ ಸರಿ. ದಾವಾ ಸ್ವತ್ತಿನ ಮುಂದಿನ ಭಾಗ ಮುಖ್ಯ ರಸ್ತೆ ಇದ್ದು ಅದು ಶಿವಾಜಿ ರಸ್ತೆ ಆಗಿದ್ದು ಆ ರಸ್ತೆಯ ಮೂಲಕ ಹೋದರೆ ರೈಲ್ವೆ ಸ್ಟೇಷನ್ ತಲುಪಹುದು ಎಂದರೆ ಸರಿ, ಅದರಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಮೌಲ್ಯ 10 ಲಕ್ಷ ಇರಬಹುದು ಎಂದರೆ ಸಾಕ್ಷಿ 10ಲಕ್ಷ ಕ್ಕಿಂತ ಹೆಚ್ಚು ಮೌಲ್ಯ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ದಾವಾ ಸ್ವತ್ತಿಗೆ ಸುಮಾರು 50 ಲಕ್ಷ ಇರಬಹುದು ಎನ್ನುತ್ತಾರೆ. ದಾವಾ ಸ್ವತ್ತಿನ 3 ಭಾಗಗಳಾಗಿ ನಾವು 3 ಜನ ಅಣ್ಣ ತಮ್ಮಂದಿರು ಪ್ರತ್ಯೇಕ ಕಬ್ಜೆಯಲ್ಲಿದ್ದೇವೆ ಎಂದರೆ ಸಾಕ್ಷಿ ದಾವಾ ಸ್ವತ್ತಿನಲ್ಲಿ ಸಮನಾಗಿ ವಿಭಾಗವಾಗಿಲ್ಲ ಆದ್ದರಿಂದ ನಾನು ದಾವೆ ಹೂಡಿದ್ದೆನೆ ಎನ್ನುತ್ತಾರೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯ ಹೆಚ್ಚು ಇರುವುದರಿಂದ ದಾವಾ ಸ್ವತ್ತು ಆರ್ ಸಿಸಿ ಮನೆ ಆಗಿರುವ ಬಗ್ಗೆ ಉದ್ದೇಶಪೂರ್ವಕವಾಗಿ ನಾನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕಿಮ್ಮತ್ತನ್ನು ಕಡಿಮೆ ತೋರಿಸುವ ಸಲುವಾಗಿ ದಾವಾ ಸ್ವತ್ತಿನ ಮನೆ ಮಣ್ಣಿನಿಂದ ಕಟ್ಟಲಾಗಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ ಸರಿಯಿದೆ.

ಸಹಿ/-

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಧೀಶರು, ಬೆಳಗಾವಿ.**